## ಸಹೃದಯರ ಸ್ಪಂದನ

# ಕೆನ್ನೆಗೆ ಹೊಡೆದಂತಿದೆ!

ಶಶಿಕುಮಾರ್ ಅವರು ಪಾಬ್ಲೊ ನೆರೂಡ ಕವಿಯ ಕುರಿತು ಬರೆದ ಲೇಖನ ದಿಗ್ಭ್ರಮೆ ಮೂಡಿಸುವಷ್ಟು ಚೆನ್ನಾಗಿದೆ. ನೆರೂಡ ಕಾವ್ಯವನ್ನು ಸಂಭ್ರಮಿಸುವ ನಾವು ಆ ಕವಿ ಸಿಲೋನ್‌ನ 'ಅಂತ್ಯಜ' ಮಹಿಳೆಯ ಮೇಲೆ ಎಸಗಿದ ಲೈಂಗಿಕ ದೌರ್ಜನ್ಯದ ಕುರಿತು ಏಕೆ ಕುರುಡಾಗಿದ್ದೇವೆ ಎಂಬ ಪ್ರಶ್ನೆಗೆ ಉತ್ತರ ಕಷ್ಟವೇನೂ ಅಲ್ಲ. ಏಕೆಂದರೆ, ಅದೇ ಬೇಟೆಗಾರ ನೆರೂಡ ನಮ್ಮ ಒಳಗೂ ಇದ್ದಾನೆ! ಹುಲಿ ಹೊಂಚು ಹಾಕಿ ಆಕ್ರಮಣ ಮಾಡುವ ಹಾಗೆ ನೆರೂಡ ಕೂಡ ಆ ಮಹಿಳೆಯ ಮೇಲೆ ಎರಗುತ್ತಾನೆ.

ತನ್ನ ಕೆಳಗೆ ಆಕೆ ವಿಗ್ರಹದ ಹಾಗೆ ಮಲಗಿದ್ದಳು ಎನ್ನುವ ನೆರೂಡನ ವಿವರಣೆಯಲ್ಲಿ ಬೇಟೆಗಾರನ ಕ್ರೌರ್ಯದ ಎಲ್ಲ ಆಯಾಮಗಳು ಒಳಗೊಂಡಿವೆ. ಪುರುಷ ಲೇಖಕರು ನೆರೂಡನ ಈ ಮುಖವನ್ನು ಮರೆತುದಕ್ಕೆ ನಾವೂ ಅಂಥವರೇ ಎಂದು ಸಮಜಾಯಿಷಿ ಕೊಟ್ಟುಕೊಳ್ಳಬಹುದು. ಆದರೆ, ಲೇಖಕಿಯರೇಕೆ ಇದನ್ನು ಮರೆಮಾಚಿದರು? ಕವಿಗಿಂತ ಕಾವ್ಯ ದೊಡ್ಡದು ಎಂದುಕೊಂಡರೇ? ಅವರೇ ಹೇಳಬೇಕು. ಕೆನ್ನೆಗೆ ಹೊಡೆದ ಹಾಗೆ ಇರುವ ಈ ಲೇಖನಕ್ಕಾಗಿ ಶಶಿಕುಮಾರ್ ಅವರಿಗೆ ಅಭಿನಂದನೆಗಳು.

ಅಗಲಿದ ಕವಿ ಎಚ್.ಎಸ್. ವೆಂಕಟೇಶಮೂರ್ತಿ ಅವರ ಕುರಿತು ಜ.ನಾ. ತೇಜಶ್ರೀ ಬರೆದ ಲೇಖನ, ಭಿನ್ನಾಭಿಪ್ರಾಯಗಳು ಇದ್ದಾಗಲೂ ಹೇಗೆ ಕಾವ್ಯವನ್ನು ಆಸ್ವಾದಿಸಬಹುದು ಮತ್ತು ಸಂಬಂಧಗಳನ್ನು ಸಂಭಾಳಿಸಬಹುದು ಎನ್ನುವುದಕ್ಕೆ ಒಂದು ಒಳ್ಳೆಯ ನಿದರ್ಶನದಂತೆ ಇದೆ. ಈಗಿನ ಕಾಲದಲ್ಲಿ ಇದು ಕಷ್ಟದ ಸಂಗತಿ... ಎಚ್‌ಎಸ್‌ವಿ ಅಪಾರವಾದ ಸಾಹಿತ್ಯ ಸೃಷ್ಟಿ ಮಾಡಿಟ್ಟು ಹೋಗಿದ್ದಾರೆ. ಅದರಲ್ಲಿ 'ಕುಮಾರವ್ಯಾಸ ಕಥಾಂತರ' ಎಂಬ ನಾಲ್ಕು ಸಂಪುಟಗಳು ಕನ್ನಡ ಸಾಹಿತ್ಯದ ಶ್ರೇಷ್ಠ ಕೃತಿಗಳ ಸಾಲಿಗೆ ಸೇರಬಹುದಾದಂಥವು. 2013ರಿಂದ 2020ರ ನಡುವಿನ ಏಳು ವರ್ಷಗಳ ಅವಧಿಯಲ್ಲಿ ಅವರು ಈ



ಸಂಪುಟಗಳನ್ನು ರಚಿಸಿದರು. ಕಥಾಂತರ ಎಂದರೆ ಕುಮಾರವ್ಯಾಸ ಹೇಳಿದ ಕಥೆಯನ್ನೇ ಇನ್ನೊಂದು ರೀತಿಯಲ್ಲಿ ಹೇಳಿದಂತೆ ಅಥವಾ ಕುಮಾರವ್ಯಾಸ ಹೇಳಿದ ಕಥೆಯ ಅಂತರಂಗವನ್ನು ತೆರೆದು ಇಟ್ಟಂತೆ. ಈ ಸಂಪುಟಗಳನ್ನು ಕೆ.ವಿ. ತಿರುಮಲೇಶ್ ಅವರು 'ಇಪ್ಪತ್ತನೆಯ ಶತಮಾನದ ಪವಾಡ' ಎಂದಿದ್ದರು.

ಎಚ್‌ಎಸ್‌ವಿಯವರು ಕಲಬುರ್ಗಿಯಲ್ಲಿ 2020ರಲ್ಲಿ ನಡೆದ 85ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ, ತಮಗಿಂತ ಹತ್ತು ವರ್ಷ ಹಿರಿಯರಾದ ಟಿ.ವಿ. ವೆಂಕಟಾಚಲ ಶಾಸ್ತ್ರಿಗಳನ್ನು ಹಿಂದೆ ಹಾಕಿ ಆಯ್ಕೆಯಾಗಿದ್ದರು. ಅದಕ್ಕಾಗಿ ಅವರು ಯಾವ ಲಾಬಿಯನ್ನೂ ಮಾಡಿರಲಿಲ್ಲ. ಆದರೆ, ತಮಗೆ ಕರ್ನಾಟಕ ಸರ್ಕಾರದ 'ಪಂಪ ಪ್ರಶಸ್ತಿ' ಬರಲಿಲ್ಲ ಎಂಬ ಕೊರಗು ಅವರಿಗೆ ಇತ್ತು!

**-ಪದ್ಮರಾಜ ದಂಡಾವತಿ**